# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನೋಡಲ್ ಅಧಿಕಾರಿ ವಾರ್ಡ್ ಸಂಖ್ಯೆ 165 ಕಂದಾಯ ಅಧಿಕಾರಿ ಚಾಮರಾಜಪೇಟೆ ಬೆಂಗಳೂರು,

**ದಿನಾಂಕ: 17.09.2022 ರಂದು ನೋಡಲ್ ಅಧಿಕಾರಿ ಚಾಮರಾಜಪೇಟೆ ವಾರ್ಡ್ ಸಂಖ್ಯೆ-165 (ಹಳೆ ವಾರ್ಡ್ ಸಂಖ್ಯೆ-140) ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು:**

| ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಮತ್ತು ಸದಸ್ಯರುಗಳ ವಿವರಗಳು: | | | ಗೈರು ಹಾಜರಿದ್ದ ಇಲಾಖೆ ಸಿಬ್ಬಂಧಿಗಳು |
|---|---|---|---|
| ಕ್ರ.ಸಂ. | ಅಧಿಕಾರಿ/ ನೌಕರರ ಹೆಸರು | ಪದನಾಮ | |
| 1 | ಶ್ರೀ. ಆರ್. ಪ್ರದೀಪ್ ರಾಥೋಡ್ | ಕಂದಾಯ ಅಧಿಕಾರಿ (ಚಾಮರಾಜಪೇಟೆ) ಮತ್ತು ನೋಡಲ್ ಅಧಿಕಾರಿ | ಸ.ಕಾ.ನಿ.ಅ BESCOM ಉಪ-ವಿಭಾಗ & ಸ.ಅ |
| 2 | ಶ್ರೀ. ಎಸ್. ಗಣೇಶ್ | ಸಂಚಾಲಕರು ಮತ್ತು ಕಂದಾಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ-165 | ಸ.ಕಾ.ನಿ.ಅ SWD ಉಪ-ವಿಭಾಗ & ಸ.ಅ |
| 3 | ಶ್ರೀ. ಅಶೋಕ .ಜಿ | ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ-165 | ಸ.ಕಾ.ನಿ.ಅ BWSSB ಉಪ-ವಿಭಾಗ & ಸ.ಅ |
| 4 | ಶ್ರೀಮತಿ. ಡಾ. ತೇಜಸ್ವಿನಿ | ವೈದ್ಯಾಧಿಕಾರಿ, ಚಾಮರಾಜಪೇಟೆ | |
| 5 | ಶ್ರೀ. ನರಸಿಂಹಮೂರ್ತಿ | ಕಂದಾಯ ವಸೂಲಿಗಾರರು, ವಾರ್ಡ್ ಸಂಖ್ಯೆ-165 | |
| 6 | ಶ್ರೀ. ಆಂಜನಮೂರ್ತಿ | ಎ.ಎಸ್.ಐ, ಸಂಚಾರಿ ಚಾಮರಾಜಪೇಟೆ | |
| 7 | ಶ್ರೀ. ರವೀಶ್ | ಸ್ಥಳೀಯ ನಾಗರೀಕರು | |
| 8 | ಶ್ರೀ. ರವಿಶಂಕರ್ | ಸ್ಥಳೀಯ ನಾಗರೀಕರು | |
| 9 | ಶ್ರೀ. ರಾಜಾರಾಮ್ ಶೆಟ್ಟಿ | ಸ್ಥಳೀಯ ನಾಗರೀಕರು | |
| 10 | ಶ್ರೀ. ನವೀನ್ಎಸ್ | ಸ್ಥಳೀಯ ನಾಗರೀಕರು | |
| 11 | ಶ್ರೀ. ಜಯರಾಮ್ | ಸ್ಥಳೀಯ ನಾಗರೀಕರು | |
| 12 | ಶ್ರೀ. ಎಂ. ರಾಘವೇಂದ್ರ | ಸ್ಥಳೀಯ ನಾಗರೀಕರು | |
| 13 | ಶ್ರೀ. ಬಿ.ಎಸ್.ಸುಬ್ಬಣ್ಣ | ಸ್ಥಳೀಯ ನಾಗರೀಕರು | |
| 14 | ಶ್ರೀ. ಡಿ.ಎಸ್. ಶ್ರೀನಾಥ್ | ಸ್ಥಳೀಯ ನಾಗರೀಕರು | |
| 15 | ಶ್ರೀ.ಎಂ.ಎಸ್.ಶ್ರೀಕಾಂತ್ | ಸ್ಥಳೀಯ ನಾಗರೀಕರು | |
| 16 | ಶ್ರೀ. ನಟರಾಜು | ಸ್ಥಳೀಯ ನಾಗರೀಕರು | |
| 17 | ಶ್ರೀ. ಜಿ.ವಿ.ಮಹೇಶ್ | ಸ್ಥಳೀಯ ನಾಗರೀಕರು | |
| 18 | ಶ್ರೀ. ವಿನಾಯಕ | ಸ್ಥಳೀಯ ನಾಗರೀಕರು | |
| 19 | ಶ್ರೀಮತಿ. ಗಂಗಮ್ಮ | ಸ್ಥಳೀಯ ನಾಗರೀಕರು | |
| 20 | ಶ್ರೀ. ವಿಜಯ್ಕುಮಾರ್ | ಸ್ಥಳೀಯ ನಾಗರೀಕರು | |

ಮಾನ್ಯ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿ ಯವರು ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು, ಸ್ಥಳೀಯ ನಾಗರೀಕರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಬಿಸಿದರು.

ಪು.ತಿ.ನೋ

ಈ ಹಿಂದಿನ ಸಭೆಯಲ್ಲಿ ನಡೆದ ವಿಷಯಗಳ ಬಗ್ಗೆ ಚರ್ಚಿಸಲಾಗಿರುವ ಕುರಿತಂತೆ ಸಂಬಂಧಪಟ್ಟ ಅಧಿಕಾರಿಗಳು ತೆಗೆದುಕೊಂಡಿರುವ ಕ್ರಮದ ಬಗ್ಗೆ ವಿಚಾರಿಸಲಾಗಿ ನಿಗಧಿತ ಅವಧಿಯೊಳಗೆ ಕೆಲಸ ಕಾರ್ಯಗಳನ್ನು ಅಧಿಕಾರಿಗಳು ಜರೂರಾಗಿ ಕ್ರಮಕೈಗೊಳ್ಳುವಂತೆ ಸೂಚಿಸಲಾಗಿ ಸಭೆ ಸೇರಿರುವ ಉದ್ದೇಶ ಮತ್ತು ಮಹತ್ವವನ್ನು ಗಂಭೀರವಾಗಿ ಪರಿಗಣಿಸುವಂತೆ ಸೂಚಿಸಲಾಯಿತು.

ಹಾಗೂ ಚಾಮರಾಜಪೇಟೆ ರೆಸಿಡೆನ್ಸಿ ವೆಲ್‌ಫೇರ್ ಅಸೋಸಿಯೇಷನ್(ರಿ)ಸಂಸ್ಥೆ ಅಧ್ಯಕ್ಷರು ರವರು ಮಾತನಾಡುತ್ತಾ ಸಂಸ್ಥೆ ವತಿಯಿಂದ ಸಲ್ಲಿಸಿರುವ ದೂರುಗಳ ಬಗ್ಗೆ ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಲಾಗಿರುವಂತೆ ಕೆಲಸಕಾರ್ಯಗಳನ್ನು ಜರೂರಾಗಿ ನಿರ್ವಹಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸುವಂತೆ ಕೋರಿದರು.

ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

**1. <u>ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಟ್ರಾಫಿಕ್ ಪೋಲೀಸ್ ಇಲಾಖೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ.</u>**

1) ಚಾಮರಾಜಪೇಟೆ ರೆಸಿಡೆನ್ಸಿ ವೆಲ್‌ಫೇರ್ ಅಸೋಸಿಯೇಷನ್(ರಿ)ಸಂಸ್ಥೆ ಅಧ್ಯಕ್ಷರು ರವರು ಮಾತನಾಡುತ್ತಾ 2ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆಯ ಶಬರಿ ಹೋಟೇಲ್ ಬಳಿ ರಸ್ತೆಗುಂಡಿ ಮುಚ್ಚುವ ಬಗ್ಗೆ ಕೂಡಲೇ ಕ್ರಮ ವಹಿಸಲು ಕೋರಿದರು.

ಚಾಮರಾಜಪೇಟೆ ಪೋಲಿಸ್ ಸಂಚಾರಿ ವಿಭಾಗದ ಅಧಿಕಾರಿಯವರು ಮಾತನಾಡುತ್ತಾ ರಸ್ತೆ ಗುಂಡಿಗಳಿಂದ ವಾಹನ ಸಂಚಾರಕ್ಕೆ ತೊಂದರೆಯಾಗಿ ಅಪಘಾತಗಳು ಸಂಭವಿಸುವ ಸಾಧ್ಯತೆಯಿರುವುದರಿಂದ ತುರ್ತಾಗಿ ರಸ್ತೆ ಗುಂಡಿಗಳನ್ನು ಮುಚ್ಚುವ ಬಗ್ಗೆ ಸೂಕ್ತ ಕ್ರಮವಹಿಸಲು ತಿಳಿಸಿದರು.

<u>**ನಿರ್ದೇಶನ:**</u> ಸ.ಕಾ.ನಿ.ಅ(ಚಾಮರಾಜಪೇಟೆ)ಉಪ-ವಿಭಾಗ & ಸ.ಅ ವಾರ್ಡ್:165 ರವರು ಸಂಚಾರಿ ಪೋಲೀಸ್ ಅಧಿಕಾರಿ ರವರೊಂದಿಗೆ ಪರಿಶೀಲಿಸಿ ಸಾರ್ವಜನಿಕ ಸಂಚಾರಕ್ಕೆ ತೊಂದರೆಯಾಗದಂತೆ ರಸ್ತೆ ಗುಂಡಿಗಳನ್ನು ಮುಚ್ಚಲು ಕೂಡಲೇ ಸೂಕ್ತ ಕ್ರಮವಹಿಸಲು ಸೂಚಿಸಲಾಯಿತು.

2) ಚಾಮರಾಜಪೇಟೆ ಮುಖ್ಯ ರಸ್ತೆಗಳಲ್ಲಿ ಹಾಗೂ ಅಡ್ಡರಸ್ತೆಗಳಲ್ಲಿ ವಾಹನಗಳು ಹಲವಾರು ದಿನಗಳಿಂದ ಒಂದೇ ಸ್ಥಳದಲ್ಲಿ ನಿಂತಿದ್ದು, ಸಾರ್ವಜನಿಕರಿಗೆ ಓಡಾಡಲು ಅಡಚಣೆಯಾಗುತ್ತಿರುವುದಾಗಿ ತಿಳಿಸಿದರು.

<u>**ನಿರ್ದೇಶನ:**</u> ಸರ್ಕಾರದ ನಿರ್ದೇಶನದಂತೆ ಬಿಡಾಡಿ ವಾಹನಗಳ ವಿಲೇವಾರಿ ಮಾಡಲು ಸ.ಕಾ.ನಿ.ಅ(ಚಾಮರಾಜಪೇಟೆ)ಉಪ-ವಿಭಾಗ & ಸ.ಅ ವಾರ್ಡ್:165 ರವರು ಸಂಚಾರಿ ಪೋಲೀಸ್ ಅಧಿಕಾರಿ ರವರಿಗೆ ಸೂಚಿಸಲಾಯಿತು.

**ಕ್ರಮ : ಸ.ಕಾ.ನಿ.ಅ(ಚಾಮರಾಜಪೇಟೆ)ಉಪ-ವಿಭಾಗ & ಸ.ಅ ವಾರ್ಡ್:165**

- **ಆರಕ್ಷಕ ನಿರೀಕ್ಷಕರು, ಸಂಚಾರಿ ವಿಭಾಗ ಚಾಮರಾಜಪೇಟೆ / ವಿ.ವಿ.ಪುರಂ / ಸೆಂಟ್ರಲ್ ಪೋಲೀಸ್ ಠಾಣೆ,**

**2. <u>ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರು ಹಾಗೂ ಒಳಚರಂಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ.</u>**

- ✓ ವಾರ್ಡ್ ವ್ಯಾಪ್ತಿಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ವತಿಯಿಂದ ನಿರ್ವಹಿಸಲಾಗಿರುವ ಕಾಮಗಾರಿಗಳು ಸರಿಯಾಗಿ ನಿರ್ವಹಿಸದೆ ರಸ್ತೆಗಳನ್ನು ಡಾಂಬರಿಕರಣ ಹಾಗೂ ರಸ್ತೆ ಗುಂಡಿಗಳನ್ನು ಮುಚ್ಚುವ ಕಾಮಗಾರಿಗಳನ್ನು ಕೂಡಲೇ ನಿರ್ವಹಿಸುವುದು.
- ✓ ನಂಜಾಂಬ ಅಗ್ರಹಾರ 2ನೆ ಮುಖ್ಯರಸ್ತೆ ಇಲ್ಲಿ ಮಳೆ ನೀರು ತುಂಬಿ ಚೇಂಬರ್‌ನಿಂದ ನೀರು ಹರಿದು ಮನೆಗಳಿಗೆ ನೀರು ನುಗ್ಗುತ್ತಿರುವ ಬಗ್ಗೆ ಕೂಡಲೇ ಕ್ರಮವಹಿಸುವುದು.

✓ ಟಿ.ಆರ್.ಮಿಲ್ ಹಿಂದು ಸ್ಮಶಾನದಲ್ಲಿ ಇರುವ ಶೌಚಾಲಯವೂ ಸರಿಯಾದ ವ್ಯವಸ್ಥೆ ಇಲ್ಲದೆ ಮುಚ್ಚಿರುವುದರಿಂದ ಸಾರ್ವಜನಿಕರು ಪರದಾಡುವಂತಾಗಿದ್ದು, ಕೂಡಲೇ ಸರಿಯಾದ ನಿರ್ವಹಣೆ ಮಾಡಲು ಚಾಮರಾಜಪೇಟೆ ರೆಸಿಡೆನ್ಸಿ ವೆಲ್‌ಫೇರ್ ಅಸೋಸಿಯೇಷನ್(ರಿ)ಸಂಸ್ಥೆ ಅಧ್ಯಕ್ಷರು ರವರು ಕೋರಿದರು.

**ನಿರ್ದೇಶನ:** ಮೇಲಿನಂತೆ ತುರ್ತಾಗಿ ಪರಿಶೀಲಿಸಿ ನೀರಿನ ಸಂಪರ್ಕವನ್ನು ದುರಸ್ಥಿಗೊಳಿಸಿ ಕಾಮಗಾರಿಗಳನ್ನು ಕೂಡಲೇ ಅಗತ್ಯ ಕ್ರಮ ತೆಗೆದುಕೊಂಡು ನಿರ್ವಹಿಸುವಂತೆ ಸೂಚಿಸಲಾಯಿತು. ವಾರ್ಡ್‌ನ ಯಾವುದೇ ನೀರು ನಿಲ್ಲುವಂತಹ ಪ್ರದೇಶದಲ್ಲಿ ಹಾಗೂ ನಿಲ್ಲುವ ಕಸದ ಲಾರಿ ಹತ್ತಿರ ಸೊಳ್ಳೆ ನಿಯಂತ್ರಿಸಲು ಔಷಧಿ ಸಿಂಪಡಣೆಗೆ ಆದೇಶಿಸಲಾಯಿತು.

**ಕ್ರಮ: ಸ.ಕಾ.ನಿ.ಅ / ಸ.ಅ BWSSB (ಚಾಮರಾಜಪೇಟೆ) ಉಪ-ವಿಭಾಗ**

**➢ ಆರೋಗ್ಯ ವೈದ್ಯಾಧಿಕಾರಿಗಳು, ಚಾಮರಾಜಪೇಟೆ**

**3. ವಾರ್ಡ್‌ನಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ.**

ವಾರ್ಡ್ ವ್ಯಾಪ್ತಿಯಲ್ಲಿ ಸಿಲ್ಟ್ ಅಂಡ್ ಟ್ರಾಕ್ಟರ್‌ಗಳು ಡೆಬ್ರಿಸ್‌ಗಳನ್ನು ಘನತ್ಯಾಜ್ಯ ಪ್ರದೇಶದಿಂದ ತೆರವು ಮಾಡಿ ಮಳೆಯಿಂದಾಗಿ ಶೇಖರಣೆಗೊಂಡಿರುವ ಡೆಬ್ರಿಸ್‌ಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

**ಕ್ರಮ: ಸ.ಕಾ.ನಿ.ಅ (ಘನತ್ಯಾಜ್ಯ) ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್:165**

**4. ವಾರ್ಡ್‌ನ ವಿವಿಧ ಕಾಮಗಾರಿಗಳ ಅಭಿವೃದ್ಧಿ ಕಾರ್ಯಗಳ ಬಗ್ಗೆ.**

1) 2ನೇ ಮುಖ್ಯರಸ್ತೆ ಕನ್ಸರ್ವೆನ್ಸಿ ರಸ್ತೆ ಕಾಮಗಾರಿಯು ಅಪೂರ್ಣಗೊಂಡಿದ್ದು ದುರಸ್ಥಿಪಡಿಸುವ ಬಗ್ಗೆ.
2) 5ನೇ ಮುಖ್ಯ ರಸ್ತೆಯಲ್ಲಿ ಜಿಯೋ ಕೇಬಲ್ ಅಳವಡಿಸಲು ತೆಗೆದಿರುವ ಗುಂಡಿಗಳನ್ನು ದುರಸ್ಥಿಗೊಳಿಸುವ ಬಗ್ಗೆ.

**ನಿರ್ದೇಶನ:** ಸಂಬಂಧಪಟ್ಟ ಗುತ್ತಿಗೆದಾರರಿಂದ ಜಿಯೋ ಕೇಬಲ್ ಅಳವಡಿಸಲು ತೆಗೆದಿರುವ ಗುಂಡಿಗಳನ್ನು ಮೊದಲಿನ ಸ್ವರೂಪಕ್ಕೆ ದುರಸ್ಥಿಗೊಳಿಸಲು ನಿರ್ದೇಶಿಸಲಾಯಿತು.

3) 5ನೇ ಮುಖ್ಯರಸ್ತೆಯಲ್ಲಿ ಬೀದಿಬದಿ ವ್ಯಾಪಾರಿಗಳು, ಹೋಟೇಲ್ ವ್ಯಾಪಾರಿಗಳು ಹಾಗೂ ಬಾಳೆ ಎಲೆ ವ್ಯಾಪಾರಿಗಳನ್ನು ತೆರವುಗೊಳಿಸುವ ಬಗ್ಗೆ.

**ನಿರ್ದೇಶನ:** ಈ ಬಗ್ಗೆ ಕಾಮಗಾರಿ ಮತ್ತು ಆರೋಗ್ಯ ವಿಭಾಗದ ಅಧಿಕಾರಿಗಳು ಮತ್ತು ಸಂಚಾರಿ ಪೋಲೀಸ್ ಇಲಾಖೆಯ ಸಿಬ್ಬಂಧಿಗಳೊಂದಿಗೆ ತೆರವು ಕಾರ್ಯಾಚರಣೆ ಆಯೋಜಿಸುವಂತೆ ಹಾಗೂ ಫುಟ್‌ಪಾತ್ ಅತಿಕ್ರಮಿಸಿರುವ ವ್ಯಾಪಾರಸ್ಥರಿಗೆ ಕಾನೂನಿನ ಅಡಿಯಲ್ಲಿ ಕ್ರಮ ಕೈಗೊಂಡು ಮಾರ್ಷಲ್‌ಗಳೊಂದಿಗೆ ಸೂಕ್ತ ದಂಡ ವಿಧಿಸಲು ನಿಯೋಜಿಸುವಂತೆ ಸೂಚಿಸಲಾಯಿತು.

4) ಚಾಮರಾಜಪೇಟೆ ರೆಸಿಡೆನ್ಸಿ ವೆಲ್‌ಫೇರ್ ಅಸೋಸಿಯೇಷನ್(ರಿ)ಸಂಸ್ಥೆ ಅಧ್ಯಕ್ಷರು ರವರು ಮಾತನಾಡುತ್ತಾ ಸ್ವತ್ತಿನ ಸಂಖ್ಯೆ 52, 2ನೇ ಅಡ್ಡ ರಸ್ತೆ, 1ನೇ ಮುಖ್ಯ ರಸ್ತೆ, ಚಾಮರಾಜಪೇಟೆ, ರಲ್ಲಿ 5 ಅಂತಸ್ತಿನ ಕಟ್ಟಡ ಕಟ್ಟಿದ್ದು, ಅದರ ಮೇಲೆ ಶೆಡ್ ಮತ್ತು ನಾಮಫಲಕ ಕೆಳಗೆ ಬಿದ್ದಿದ್ದು, ಕಾಮನ್ ಪ್ಯಾಸೇಜ್ ನಲ್ಲಿ ಇರುವುದರಿಂದ ಇಲ್ಲಿ 10-ಮನೆಗಳಿದ್ದು, ಓಡಾಡಲು ಬೇರೆ ಸ್ಥಳವು ಇರುವುದಿಲ್ಲ.

5) ವಾರ್ಡ್ ವ್ಯಾಪ್ತಿಯಲ್ಲಿ ಮಳೆನೀರು ಸರಾಗವಾಗಿ ಹರಿದು ಹಾದುಹೋಗುವ ಬಗ್ಗೆ ಚರಂಡಿಯಲ್ಲಿ ಹೂಳು ತೆಗೆಯಲು ಕ್ರಮ ಕೈಗೊಳ್ಳುವಂತೆ ಕೋರಿದರು.

ಕ್ರಮ :ಸ.ಕಾ.ನಿ.ಅ(ಚಾಮರಾಜಪೇಟೆ)ಉಪ-ವಿಭಾಗ & ಸ.ಅ ವಾರ್ಡ್:165

:ಸ.ಕಾ.ನಿ.ಅ BWSSB (ಚಾಮರಾಜಪೇಟೆ) ಉಪ-ವಿಭಾಗ

6) **ಬೀದಿ ದೀಪದ ನಿರ್ವಹಣೆ ಬಗ್ಗೆ.**

ಚಾಮರಾಜಪೇಟೆ ರೆಸಿಡೆನ್ಸಿ ವೆಲ್‌ಫೇರ್ ಅಸೋಸಿಯೇಷನ್(ರಿ)ಸಂಸ್ಥೆ ಅಧ್ಯಕ್ಷರು ರವರು ಮಾತನಾಡುತ್ತಾ ಮಕ್ಕಳ ಕೂಟ ಉದ್ಯಾನವನದಲ್ಲಿನ ದೀಪದ ಕಂಬಗಳಲ್ಲಿ ವಿದ್ಯುತ್ ತಂತಿಗಳು ಜೋತುಬಿದ್ದಿದ್ದು, ಎದುರುಗಡೆ ಬೀದಿ ದೀಪದ ಕಂಬ ವಾಲಿರುತ್ತದೆ. ಉದ್ಯಾನವನದಲ್ಲಿ ಎಲ್ಲಾ ಓಡಾಡುವ ಸಾರ್ವಜನಿಕರಿಗೆ ಜೀವಭಯವಾಗಿದ್ದು ದುರಂತ ಪರಿಸ್ಥಿತಿ ಉಂಟಾಗಿರುತ್ತದೆ, ಆದ್ದರಿಂದ ಕೂಡಲೇ ಕ್ರಮ ವಹಿಸಲು ಕೋರಿದರು.

➢ **ಕಾ.ಪಾ.ಅ/ಸ.ಕಾ.ನಿ.ಅ(ವಿದ್ಯುತ್-ಪಶ್ಚಿಮ) ಬಿಬಿಎಂಪಿ**

7) **ಆರೋಗ್ಯ ಇಲಾಖೆಗೆ ಸಂಬಂಧಪಟ್ಟಂತೆ ವಿಷಯಗಳು**

ಮಾನ್ಯ ಅಧ್ಯಕ್ಷರು ಆರೋಗ್ಯ ಇಲಾಖೆಗೆ ಸಂಬಂಧಪಟ್ಟಂತೆ ತೆಗೆದುಕೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ವಿವರಿಸುವಂತೆ ಸೂಚಿಸಿದರು.

ವೈದ್ಯಾಧಿಕಾರಿಗಳು, ಚಾಮರಾಜಪೇಟೆ ರವರು ಈ ಕೆಳಕಂಡಂತೆ ಪ್ರಕರಣಗಳು ಹೆಚ್ಚಾಗಲಿದ್ದು ಚಾಮರಾಜಪೇಟೆ ರೆಸಿಡೆನ್ಸಿ ವೆಲ್‌ಫೇರ್ ಅಸೋಸಿಯೇಷನ್(ರಿ)ಸಂಸ್ಥೆ ವತಿಯಿಂದ ಸಾರ್ವಜನಿಕರಲ್ಲಿ ಅರಿವು ಮೂಡಿಸಿ ಮುಂಜಾಗ್ರತಾ ಕ್ರಮವನ್ನು ತೆಗೆದುಕೊಂಡು ಸಾರ್ವಜನಿಕರು ಸದುಪಯೋಗ ಪಡೆದುಕೊಳ್ಳುವಂತೆ ಕೋರಿದರು.

- ಕುಷ್ಠ ರೋಗ ತಡೆಗಟ್ಟುವಿಕೆ ಕಾರ್ಯಕ್ರಮ ಅನುಷ್ಠಾನಗೊಂಡಿರುವ ಬಗ್ಗೆ ತಿಳಿಸಲಾಯಿತು.
- ಹೆಚ್1 ಎನ್1 ಪ್ರಕರಣಗಳು ಹೆಚ್ಚಾಗುತ್ತಿದ್ದು, ಮುಂಜಾಗ್ರತಾ ಲಸಿಕೆ ಸಾರ್ವಜನಿಕರು ಕಡ್ಡಾಯವಾಗಿ ಪಡೆಯುಂತೆ ತಿಳಿಸಿದರು.
- ಆರೋಗ್ಯ ಕೇಂದ್ರದಲ್ಲಿ ಮಕ್ಕಳಿಗೆ ನೀಡುತ್ತಿರುವ ಚಿಕಿತ್ಸೆಗಳ ಬಗ್ಗೆ ಮತ್ತು ಅನುಕೂಲಗಳ ಬಗ್ಗೆ ವಿವರಿಸಿದರು.
- ಹಿರಿಯ ನಾಗರೀಕರಿಗೆ ಕೋವಿಡ್-19 ಬೂಸ್ಟರ್ ಲಸಿಕೆ ಲಭ್ಯವಿದ್ದು ವಾರ್ಡ್ ವ್ಯಾಪ್ತಿಯಲ್ಲಿ ಸದುಪಯೋಗ ಪಡೆದುಕೊಳ್ಳುವಂತೆ ತಿಳಿಸಿದರು.

**ಕ್ರಮ : ಆರೋಗ್ಯ ವೈದ್ಯಾಧಿಕಾರಿಗಳು, ಚಾಮರಾಜಪೇಟೆ**

ಮೇಲ್ಕಂಡ ಎಲ್ಲಾ ವಿಷಯಗಳೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ವಂದನಾರ್ಪಣೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ ಮತ್ತು
ಕಂದಾಯ ಪರಿವೀಕ್ಷಕರು

ಅಧ್ಯಕ್ಷರು
ವಾರ್ಡ್:165 ನೋಡಲ್ ಅಧಿಕಾರಿ
**ಕಂದಾಯ ಅಧಿಕಾರಿ**
**ಚಾಮರಾಜಪೇಟೆ ವಲಯ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಪ್ರತಿಯನ್ನು:-**

1. ಮಾನ್ಯ ಆಡಳಿತಾಧಿಕಾರಿ, ಬಿಬಿಎಂಪಿ ರವರ ಅವಗಾಹನೆಗೆ ತರಲಾಗಿದೆ.
2. ಮಾನ್ಯ ಮುಖ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗೆ ತರಲಾಗಿದೆ.
3. ಮಾನ್ಯ ಜಂಟಿ ಆಯುಕ್ತರು (ಪಶ್ಚಿಮ) ಬಿಬಿಎಂಪಿ ರವರ ಅವಗಾಹನೆಗೆ ತರಲಾಗಿದೆ.
4. ಮಾನ್ಯ ಮುಖ್ಯ ಅಭಿಯಂತರರು (ಪಶ್ಚಿಮ) ಬಿಬಿಎಂಪಿ ರವರ ಅವಗಾಹನೆಗೆ ತರಲಾಗಿದೆ.
5. ಕಾರ್ಯಪಾಲಕ ಅಭಿಯಂತರರು(ಚಾಮರಾಜಪೇಟೆ) / (ವಿದ್ಯುತ್-ಪಶ್ಚಿಮ)ವಿಭಾಗರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
6. ಸ.ಕಾ.ನಿ.ಅ(ಚಾಮರಾಜಪೇಟೆ)ಉಪ-ವಿಭಾಗ & ಸ.ಅ ವಾರ್ಡ್:165 ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
7. ಸ.ಕಾ.ನಿ.ಅ & ಸ.ಅ(BWSSB) / (BESCOM ಚಾಮರಾಜಪೇಟೆ ಉಪ-ವಿಭಾಗ ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
8. ಸ.ಕಾ.ನಿ.ಅ & ಸ.ಅ(ಚಾಮರಾಜಪೇಟೆ / ಬೃಹತ್ ರಾಜಕಾಲುವೆ(SWD-ಪಶ್ಚಿಮ)ಉಪ-ವಿಭಾಗ ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
9. ಆರೋಗ್ಯ ವೈದ್ಯಾಧಿಕಾರಿ(ಚಾಮರಾಜಪೇಟೆ) ವಲಯ ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
10. ಸ.ಕಾ.ನಿ.ಅ & ಸ.ಅ(ಘನತ್ಯಾಜ್ಯ ನಿರ್ವಹಣೆ- ಚಾಮರಾಜಪೇಟೆ ಉಪ ವಿಭಾಗ ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
11. ಸಹ ಕಂದಾಯ ಅಧಿಕಾರಿ(ಚಾಮರಾಜಪೇಟೆ) ಉಪ-ವಿಭಾಗ ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
12. ಆರಕ್ಷಕ ನಿರೀಕ್ಷಕರು, ಕಾನೂನು ಮತ್ತು ಸುವ್ಯವಸ್ಥೆ / ಸಂಚಾರಿ ವಿಭಾಗ ಚಾಮರಾಜಪೇಟೆ / ವಿ.ವಿ.ಪುರಂ / ಸೆಂಟ್ರಲ್ ಪೋಲೀಸ್ ಠಾಣೆ, ಬೆಂಗಳೂರು ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
13. ಚಾಮರಾಜಪೇಟೆ ರೆಸಿಡೆನ್ಸಿ ವೆಲ್‌ಫೇರ್ ಅಸೋಸಿಯೇಷನ್(ರಿ) ಸಂಸ್ಥೆ ರವರ ಮಾಹಿತಿಗಾಗಿ .
14. ವಾರ್ಡ್ ಸಂಖ್ಯೆ: 165 ಚಾಮರಾಜಪೇಟೆ ವಾರ್ಡ್ ಕಮಿಟಿ ಸದಸ್ಯರ ಮಾಹಿತಿಗಾಗಿ / ಕಛೇರಿ ಕಡತಕ್ಕೆ.